ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಪತ್ರಿಕೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.ಃ 1544/2022

.............................................................................

CW 12
PW 08

| | | |
|---|---|---|
| ಹೆಸರು | ಃ | ಅರುಣ ಕಟ್ಟಿಮನಿ |
| ತಂದೆಯ ಹೆಸರು | ಃ | ಫಕೀರಪ್ಪ |
| ವಯಸ್ಸು | ಃ | 53 ವರ್ಷ |
| ಉದ್ಯೋಗ | ಃ | ಹಿರಿಯ ಮೋಟಾರ ವಾಹನ ನಿರೀಕ್ಷಕರ, ಗದಗ |
| ವಾಸಸ್ಥಳ | ಃ | ಗದಗ. |

ದಿನಾಂಕ 22-04-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

2022 ರಿಂದ 2025 ರ ಜುಲೈ ರ ವರೆಗೆ ಬೆಳಗಾವಿ ಕಚೇರಿಯಿಂದ ತಿಂಗಳಿಗೊಮ್ಮೆ ದಾಂಡೇಲಿ ಎ ಆರ್ ಟಿ ಓ ಕಚೇರಿಗೆ ಬಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 14-10-2022 ರಂದು ಹಳಿಯಾಳ ಪೊಲೀಸ ಠಾಣೆಯಿಂದ ಅಪಘಾತಕ್ಕೊಳಪಟ್ಟ ವಾಹನಗಳ ಪರಿಶೀಲನೆ ಕುರಿತು ಕೋರಿಕೆ ಪತ್ರವನ್ನು ಪಡೆದು, ಅದೇ ದಿನ ಹಳಿಯಾಳ ಪೊಲೀಸ ಠಾಣೆಗೆ ಭೇಟಿ ನೀಡಿ ಕೆಎ-25-ಎಫ್-2380 ಮತ್ತು ಕೆಎ-65-ಎಚ್-0408 ನೇದ್ದನ್ನು ಪರಿಶೀಲನೆ ಮಾಡಿರುತ್ತೇನೆ. ಕೆಎ-25-ಎಫ್-2380 ಬಸ್ಸನ್ನು ಪರಿಶೀಲನೆ ಮಾಡಿದಾಗ ಅದಕ್ಕೆ ಯಾವುದೇ ರೀತಿಯ Fresh Damage ಕಂಡು ಬಂದಿರುವುದಿಲ್ಲ, ಮೋಟಾರ ಸೈಕಲ್ ಕೆಎ-65-ಎಚ್-0408 ನೇದ್ದನ್ನು ಪರಿಶೀಲನೆ ಮಾಡಿದಾಗ ಮುಂದಿನ ಎಡಬದಿಯ ಇಂಡಿಕೇಟರ್ ಜಖಂಗೊಂಡಿತ್ತು, ಎರಡನೇಯದಾಗಿ ಎಡ ಬದಿ ಹಿನ್ನೋಟ ಕನ್ನಡಿ ಜಖಂ ಆಗಿತ್ತು. ಹೆಡ್ ಲೈಟ್ ವೈಸರ್ ನ ಎಡ ಬದಿ ಭಾಗಕ್ಕೆ ಮತ್ತು ಎಡಬದಿಯ ಸೆಂಟರ್ ಲೆಗ್ ಗಾರ್ಡಗೆ ತಾಜಾ ತೆರಚಿದ ಗುರುತುಗಳು ಆಗಿದ್ದವು. ಇವುಗಳನ್ನು ಹೊರತುಪಡಿಸಿ ಬೇರೆ ರೀತಿಯ ಜಖಂಗಳು ಆಗಿರುವುದಿಲ್ಲ. ಎರಡೂ ವಾಹನಗಳ ಯಾಂತ್ರಿಕ ತಡೆ ಸುಸ್ಥಿತಿಯಲ್ಲಿದ್ದು ಅಪಘಾತವು ವಾಹನಗಳ ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ ಎಂದು ವಾಹನ ಪರಿಶೀಲನಾ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದರಿ ವಾಹನ ಪರಿಶೀಲನಾ ಪ್ರಮಾಣ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಮೇರೆಗೆ ಅದನ್ನು **ನಿಪಿ15 ಎಂದು**, ಸಾಕ್ಷಿಯ ಸಹಿಯನ್ನು

**ನಿಪಿ 15 ಎ ಎಂದು** ಗುರುತಿಸಲಾಯಿತು. ಸಾಕ್ಷಿಗೆ ನಿಪಿ 2 ಅನ್ನು ತೋರಿಸಲಾಗಿ ಸದರಿ ವಾಹನವು ಆ ದಿನ ನಾನು ಪರಿಶೀಲನೆ ಮಾಡಿರುತ್ತೇನೆ ಎನ್ನುತ್ತಾರೆ. ಬಸ್ಸನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ** ಶ್ರೀ ಆರೋಪಿಯ ಪರ ಶ್ರೀಮತಿ ಆರ್ ಎಮ್ ಸಿ ವಕೀಲರಿಂದ.

ಮೋಟಾರ ಸೈಕಲ್ ಇಂಡಿಕೇಟರ್ ಗಳು ಸಾಮಾನ್ಯವಾಗಿ ಪ್ಲಾಸ್ಟಿಕ್ ನಿಂದ ಇರುವುದರಿಂದ ಕೈಯಿಂದ ಮುರಿಯಬಹುದು ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಸಾಮಾನ್ಯವಾಗಿ ಮೋಟಾರ ಸೈಕಲ್‌ನ ಸ್ಟ್ಯಾಂಡ್ ಸರಿಯಾಗಿ ಇರದಿದ್ದರೆ ಮೋಟಾರ ಸೈಕಲ್ ಎಡಬದಿಗೆ ಬಿಳುತ್ತದೆ ಎಂದರೆ ಸಾಕ್ಷಿ ಇರಬಹುದು, ಸಾಕ್ಷಿ ಮುಂದುವರೆದು ನಾನು ಅಪಘಾತಕ್ಕೊಳಗಾದ ಮೋಟಾರ ಸೈಕಲ್ ಪರಿಶೀಲನೆ ಮಾಡಿ ನಿಪಿ 15 ರಂತೆ ವರದಿ ನೀಡಿರುತ್ತೇನೆ. ಮೋಟಾರ ಸೈಕಲ್ ಗೆ ಆದ ಜಖಂಗಳು ಎರಡೂ ವಾಹನಗಳ ನಡುವೆ ಆದ ಅಪಘಾತದಿಂದ ಆದ ಜಖಂಗಳು ಅಲ್ಲ ಎಂದರೆ ಸಾಕ್ಷಿ ಅಪಘಾತ ಹೇಗೆ ಆಗಿದೆ ಎಂದು ನಾನು ನೋಡಿಲ್ಲ, ನಾನು ಅಪಘಾತಕ್ಕೊಳಗಾದ ಮೋಟಾರ ಸೈಕಲ್ ಪರಿಶೀಲನೆ ಮಾಡಿ ಈ ರೀತಿಯ ಜಖಂಗಳು ಕಂಡು ಬಂದಿರುತ್ತವೆ ಎನ್ನುತ್ತಾರೆ. ನಿಪಿ 15 ಅನ್ನು ವಾಹನಗಳ ಪರಿಶೀಲನೆ ಮಾಡಲು ಕಚೇರಿಯಲ್ಲಿಯೇ ತಯಾರಿಸಿ ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ. ಹಳಿಯಾಳ